**ಕರ್ನಾಟಕ ಸರ್ಕಾರ**

ಸಂಖ್ಯೆ:ಕಂಇ 03 ಬಿಎಂಎಂ 2019

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ: 07.04.2020.

**ಅಧಿಕೃತ ಜ್ಞಾಪನ**

ವಿಷಯ:- ಕಂದಾಯ ಇಲಾಖೆಯ ಶಿರಸ್ತೇದಾರ / ಉಪತಹಶೀಲ್ದಾರ್ ವೃಂದದ ದಿನಾಂಕ : 27.04.1978 ರಿಂದ 31.12.2018ರ ವರೆಗೆ ಅಂದರೆ ದಿನಾಂಕ: 01.01.2019ರಲ್ಲಿದ್ದಂತೆ ರಾಜ್ಯ ಮಟ್ಟದ ಕ್ರೋಢೀಕೃತ ಅಂತಿಮ ಜೇಷ್ಠತಾ ಪಟ್ಟಿ ಪ್ರಕಟಿಸುವ ಕುರಿತು.

ಉಲ್ಲೇಖ:-1. ಮಾನ್ಯ ಸರ್ವೋಚ್ಚ ನ್ಯಾಯಾಲಯವು ಸಿವಿಲ್ ಅಪೀಲ್ ಸಂಖ್ಯೆ: 2368/2011 ಮತ್ತು ಇತರರ ವಿರುದ್ಧ ಯೂನಿಯನ್ ಆಫ್ ಇಂಡಿಯಾ ಪ್ರಕರಣದಲ್ಲಿ ಹೊರಡಿಸಿರುವ ತೀರ್ಪು ದಿನಾಂಕ: 09.02.2017.

2. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 182 ಎಸ್‌ಆರ್‌ಆರ್ 2011, ದಿನಾಂಕ: 06.05.2017.
3. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 186 ಎಸ್‌ಆರ್‌ಎಸ್ 2018, ದಿನಾಂಕ: 27.02.2019.
4. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 186 ಎಸ್‌ಆರ್‌ಎಸ್ 2018, ದಿನಾಂಕ: 15.05.2019
5. ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ: ಕಂಇ 03 ಬಿಎಂಎಂ 2019, ದಿನಾಂಕ : 11.07.2019.
6. ಪ್ರಾದೇಶಿಕ ಆಯುಕ್ತರು, ಕಲಬುರಗಿ ವಿಭಾಗ ಇವರ ಅಧಿಕೃತ ಜ್ಞಾಪನ ಸಂಖ್ಯೆ: ಪ್ರಾಆಕ / ಇಎಸ್‌ಎ / 136 / 2019-20, ದಿನಾಂಕ: 24.01.2020.
7. ಪ್ರಾದೇಶಿಕ ಆಯುಕ್ತರು, ಮೈಸೂರು ವಿಭಾಗ ಇವರ ಅಧಿಕೃತ ಜ್ಞಾಪನ ಸಂಖ್ಯೆ: ಸಿಬ್ಬಂದಿ (2) ಸಿಆರ್ 20 / 2019-20, ದಿನಾಂಕ: 12.02.2020
8. ಪ್ರಾದೇಶಿಕ ಆಯುಕ್ತರು, ಬೆಂಗಳೂರು ವಿಭಾಗ ಇವರ ಅಧಿಕೃತ ಜ್ಞಾಪನ ಸಂಖ್ಯೆ: ಸಿಬ್ಬಂದಿ (2) ಸಿಆರ್ 95 / 2019-20, ದಿನಾಂಕ: 20.02.2020
9. ಪ್ರಾದೇಶಿಕ ಆಯುಕ್ತರು, ಬೆಳಗಾವಿ ವಿಭಾಗ ಇವರ ಅಧಿಕೃತ ಜ್ಞಾಪನ ಸಂಖ್ಯೆ: ಸಿಬ್ಬಂದಿ / 2(1) / 115 / 2019-20, ದಿನಾಂಕ: 07.03.2020.

*****

ಶ್ರೀ ಬಿ.ಕೆ.ಪವಿತ್ರ ಮತ್ತು ಇತರರು ವಿರುದ್ಧ ಯೂನಿಯನ್ ಆಫ್ ಇಂಡಿಯಾ ಪ್ರಕರಣದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ಸಿವಿಲ್ ಅಪೀಲ್ ಸಂಖ್ಯೆ: 2368/2011 ಮತ್ತು ಇತರ ಸಿವಿಲ್

ಅಪೀಲುಗಳಲ್ಲಿ ದಿನಾಂಕ: 09.02.2017 ರಂದು ನೀಡಿರುವ ತೀರ್ಪಿನಲ್ಲಿ ಕರ್ನಾಟಕ (ರಾಜ್ಯದ ಸಿವಿಲ್ ಸೇವೆಗಳಲ್ಲಿಯ ಹುದ್ದೆಗಳಿಗೆ) ಮೀಸಲಾತಿ ಆಧಾರದ ಮೇಲೆ ಬಡ್ತಿ ಹೊಂದಿದ ಸರ್ಕಾರಿ ನೌಕರರ ಜೇಷ್ಠತೆಯ ನಿರ್ಧಾರಣಾ ಅಧಿನಿಯಮ, 2002 ರ ಪ್ರಕರಣ 3 ಮತ್ತು 4 ನ್ನು ಸಂವಿಧಾನದ ಅನುಚ್ಛೇದ-14 ಮತ್ತು 16ಕ್ಕೆ ಅಧಿಕಾರಾತೀತ (ultra-vires Articles 14 and 16 of the Constitution) ಎಂದು ಆದೇಶಿಸಿರುತ್ತದೆ.

2. ಈ ಹಿನ್ನೆಲೆಯಲ್ಲಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ (ಸೇವಾ ನಿಯಮಗಳು) ವಿಭಾಗವು ಉಲ್ಲೇಖಿತ (2)ರಲ್ಲಿನ ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 182 ಎಸ್ಆರ್ಆರ್ 2011, ದಿನಾಂಕ: 06.05.2017 ರಲ್ಲಿ ನೀಡಿರುವ ಮಾರ್ಗಸೂಚಿಗಳನುಸಾರ ಮುಂಬಡ್ತಿಯಲ್ಲಿ ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಟ ಪಂಗಡದ ನೌಕರರಿಗೆ ಮೀಸಲಾತಿ ಅನುಸರಿಸಿರುವ ಎಲ್ಲಾ ವೃಂದಗಳ ಜೇಷ್ಠತಾ ಪಟ್ಟಿಗಳನ್ನು ಪರಿಷ್ಕರಿಸಲು ಆದೇಶಿಸಿರುತ್ತದೆ.

3. ಮಾನ್ಯ ಸರ್ವೋಚ್ಚ ನ್ಯಾಯಾಲಯವು ಸಿವಿಲ್ ಅಪೀಲ್ ಸಂಖ್ಯೆ: 2368/2011 – ಶ್ರೀ ಬಿ.ಕೆ.ಪವಿತ್ರ ಮತ್ತು ಇತರರು ವಿರುದ್ಧ ಕೇಂದ್ರ ಸರ್ಕಾರ ಮತ್ತು ಇತರರು ಮತ್ತು ಸಂಬಂಧಿಸಿದ ರಿವ್ಯೂ ಅರ್ಜಿ ಹಾಗೂ ರಿಟ್ ಅರ್ಜಿಗಳಲ್ಲಿನ ಪ್ರಕರಣ ಎಂ.ಎ.ಸಂಖ್ಯೆ: 1151/2018 ರಲ್ಲಿ ದಿನಾಂಕ: 10.05.2019 ರಂದು ನೀಡಿದ ತೀರ್ಪಿನಲ್ಲಿ ಕರ್ನಾಟಕ ರಾಜ್ಯ ಪತ್ರದಲ್ಲಿ ದಿನಾಂಕ: 23.06.2018 ರಂದು ಪ್ರಕಟಿಸಲಾದ ಕರ್ನಾಟಕ (ರಾಜ್ಯದ ಸಿವಿಲ್ ಸೇವೆಯಲ್ಲಿನ ಹುದ್ದೆಗಳಿಗೆ) ಮೀಸಲಾತಿ ಆಧಾರದ ಮೇಲೆ ಬಡ್ತಿ ಹೊಂದಿರುವ ಸರ್ಕಾರಿ ನೌಕರರಿಗೆ ತತ್ಪರಿಣಾಮದ ಜೇಷ್ಠತೆಯನ್ನು ವಿಸ್ತರಿಸುವ ಅಧಿನಿಯಮ, 2017ರ ಸಂವಿಧಾನಿಕ ಸಿಂಧುತ್ವವನ್ನು ಎತ್ತಿಹಿಡಿದಿರುವುದರಿಂದ, 2017ರ ಅಧಿನಿಯಮದನ್ವಯ ಕ್ರಮ ತೆಗೆದುಕೊಳ್ಳುವ ಬಗ್ಗೆ ಉಲ್ಲೇಖ (3) ಮತ್ತು (4)ರ ಸರ್ಕಾರದ ಆದೇಶಗಳಲ್ಲಿ ಸೂಚನೆಗಳನ್ನು ನೀಡಲಾಗಿರುತ್ತದೆ.

4. 2017ರ ಅಧಿನಿಯಮದ ಸೆಕ್ಷನ್ 4ರಲ್ಲಿ "ಈ ಅಧಿನಿಯಮದಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರೆ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ, ಮೀಸಲಾತಿ ಆದೇಶದಲ್ಲಿ ಉಪಬಂಧಿಸಲಾದಂತೆ ಬಡ್ತಿಯಲ್ಲಿ ಮೀಸಲಾತಿ ಆದೇಶದ ನೀತಿಗೆ ಅನುಸಾರವಾಗಿ 1978ರ ಏಪ್ರಿಲ್ 27ನೇ ದಿನಾಂಕದಿಂದ ಜಾರಿಗೆ ಬರುವಂತೆ ಬಡ್ತಿ ಹೊಂದಿದ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳಿಗೆ ಸೇರಿದ ಸರ್ಕಾರಿ ನೌಕರರಿಗೆ ಈಗಾಗಲೇ ನೀಡಲಾಗಿರುವ ತತ್ಪರಿಣಾಮ ಜೇಷ್ಟತೆಯು ಸಿಂಧುವಾಗಿರತಕ್ಕದ್ದು ಮತ್ತು ಅದನ್ನು ಸಂರಕ್ಷಿಸತಕ್ಕದ್ದು ಹಾಗೂ ಅದನ್ನು ಭಂಗಗೊಳಿಸತಕ್ಕದ್ದಲ್ಲ" ಎಂದು ತಿಳಿಸಿದೆ.

5. ಈ ಹಿನ್ನೆಲೆಯಲ್ಲಿ ಉಲ್ಲೇಖ (4)ರ ಆದೇಶದಲ್ಲಿ ಉಲ್ಲೇಖ (3)ರ ಆದೇಶದ ಖಂಡಿಕೆ-8ರ ಉಪಖಂಡಿಕೆ (2)ರಲ್ಲಿ ಉಲ್ಲೇಖಿಸಲಾದ, ಕರ್ನಾಟಕ ರಾಜ್ಯ ಸಿವಿಲ್ ಸೇವಾ (ಮುಂಬಡ್ತಿ, ವೇತನ ಮತ್ತು ಪಿಂಚಣಿಗಳ ಕ್ರಮಬದ್ಧತೆ) ಅಧಿನಿಯಮ 1973ರ ಸೆಕ್ಷನ್ 4, 5 ಮತ್ತು 6ನ್ನು ಸೆಕ್ಷನ್ 9ರೊಡನೆ ಸಹವಾಚನ ಮಾಡಿಕೊಂಡು, ಇವುಗಳನ್ವಯ ತಾತ್ಕಾಲಿಕ/ಅಂತಿಮ ಜೇಷ್ಟತಾ ಪಟ್ಟಿಗಳನ್ನು ತಯಾರಿಸಿ ಪ್ರಕಟಿಸುವ, ಅರ್ಹತಾ ದಿನಾಂಕಗಳನ್ನು ನಿಗದಿಪಡಿಸುವ, ಮುಂಬಡ್ತಿಗಳನ್ನು ಪುನರಾವಲೋಕನ ಮಾಡುವ, ವೇತನ ಮತ್ತು ಪಿಂಚಣಿಗಳನ್ನು ನಿಗದಿಪಡಿಸುವುದನ್ನು ಒಳಗೊಂಡ ಪ್ರಕ್ರಿಯೆಯನ್ನು ಗರಿಷ್ಠ 30 ದಿನಗಳೊಳಗಾಗಿ ಪೂರ್ಣಗೊಳಿಸತಕ್ಕದ್ದು ಎಂದು ತಿಳಿಸಿದೆ.

--3

6. ಕರ್ನಾಟಕ ರಾಜ್ಯ (ಸಿವಿಲ್ ಸೇವೆಯಲ್ಲಿನ ಹುದ್ದೆಗಳಿಗೆ) ಮೀಸಲಾತಿ ಆಧಾರದ ಮೇಲೆ ಬಡ್ತಿ ಹೊಂದಿರುವ ಸರ್ಕಾರಿ ನೌಕರರಿಗೆ ತತ್ಪರಿಣಾಮದ ಜೇಷ್ಠತೆಯನ್ನು ವಿಸ್ತರಿಸುವ ಅಧಿನಿಯಮ, 2017ರ ಪ್ರಕರಣ 3 ಮತ್ತು 4 ನ್ನು ಅದರ ಪ್ರಕರಣ 5 ರೊಂದಿಗೆ ಸಹವಾಚನ ಮಾಡಿಕೊಂಡಂತೆ ದಿನಾಂಕ: 27.04.1978 ರಿಂದ ಮೀಸಲಾತಿಯನ್ವಯ ನೀಡಲಾದ ಪದೋನ್ನತಿಗಳನ್ನು ನಿರ್ಧರಿಸಲಾಗಿದೆ. ಹಾಗಾಗಿ, ಸದರಿ ಜೇಷ್ಠತಾ ಪಟ್ಟಿಗಳಲ್ಲಿ ನೀಡಲಾಗಿದ್ದ ಅರ್ಹತಾ ದಿನಾಂಕಗಳು ಸಿಂಧುವಾಗಿವೆ.

7. ಅದರಂತೆ, ಪ್ರಾದೇಶಿಕ ಆಯುಕ್ತರು, ಬೆಂಗಳೂರು, ಮೈಸೂರು, ಬೆಳಗಾವಿ ಮತ್ತು ಕಲಬುರಗಿ ಇವರುಗಳು ಆಯಾ ವಿಭಾಗದ ಎಲ್ಲಾ ಜಿಲ್ಲೆಯ ಜಿಲ್ಲಾಧಿಕಾರಿಗಳು ಪ್ರಚುರ ಪಡಿಸಿರುವ ಅವರ ಜಿಲ್ಲೆಯ ಪ್ರ.ದ.ಸ / ಪ್ರ.ದ.ರಾನಿ / ಶೀಘ್ರಲಿಪಿಗಾರರ ವೃಂದದ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ಪರಿಶೀಲಿಸಿ ಶಿರಸ್ತೇದಾರ್ / ಉಪತಹಶೀಲ್ದಾರ್ ವೃಂದದ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ಸಕ್ಷಮ ಪ್ರಾಧಿಕಾರಿಯು ಪ್ರಕಟಿಸಿರುತ್ತಾರೆ.

8. ಉಲ್ಲೇಖ(5)ರ ಅಧಿಕೃತ ಜ್ಞಾಪನದಲ್ಲಿ ನಾಲ್ಕು ಪ್ರಾದೇಶಿಕ ಆಯುಕ್ತರುಗಳು ಹೊರಡಿಸಿದ ತಾತ್ಕಾಲಿಕ ಜೇಷ್ಠತಾಪಟ್ಟಿಯ ಆಧಾರದ ಮೇಲೆ ಶಿರಸ್ತೇದಾರ್ / ಉಪತಹಶೀಲ್ದಾರ್ ವೃಂದದ ರಾಜ್ಯ ಮಟ್ಟದ ಕ್ರೋಢೀಕೃತ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ದಿನಾಂಕ: 27.04.1978 ರಿಂದ 31.12.2018ರ ವರೆಗೆ ಅಂದರೆ ದಿನಾಂಕ: 01.01.2019ರಲ್ಲಿದ್ದಂತೆ ಪ್ರಕಟಿಸಲಾಗಿತ್ತು. ಸದರಿ ಕರಡು ತಾತ್ಕಾಲಿಕ ಜೇಷ್ಠತಾ ಪಟ್ಟಿಗೆ ಆಕ್ಷೇಪಣೆಗಳಿದ್ದಲ್ಲಿ ಭಾದಿತ ನೌಕರರು ಅಂತಹ ಆಕ್ಷೇಪಣೆ / ಸಲಹೆಗಳನ್ನು 15 ದಿನಗಳ ಒಳಗಾಗಿ ಕಂದಾಯ ಇಲಾಖೆಗೆ ಸಲ್ಲಿಸಬಹುದಾಗಿದೆ ಹಾಗೂ ನಿಗದಿತ ಅವಧಿಯ ನಂತರ ಬಂದಂತಹ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ ಎಂದು ತಿಳಿಸಲಾಗಿತ್ತು.

9. ರಾಜ್ಯ ಮಟ್ಟದ ಶಿರಸ್ತೇದಾರ್/ಉಪತಹಶೀಲ್ದಾರ್ ವೃಂದದ ದಿನಾಂಕ: 27.04.1978 ರಿಂದ 31.12.2018ರ ವರೆಗೆ ಅಂದರೆ ದಿನಾಂಕ: 01.01.2019ರಲ್ಲಿದ್ದಂತೆ ಕರಡು ಕ್ರೋಢೀಕೃತ ತಾತ್ಕಾಲಿಕ ಜೇಷ್ಠತಾ ಪಟ್ಟಿಗೆ ನೌಕರರು ಆಕ್ಷೇಪಣೆಗಳನ್ನು ಸಲ್ಲಿಸಿದ್ದು ಸದರಿ ಆಕ್ಷೇಪಣೆಗಳನ್ನು ನಿಯಮಾನುಸಾರ ಪರಿಶೀಲಿಸಿ ಕ್ರಮವಹಿಸುವಂತೆ ಶಿರಸ್ತೇದಾರ್/ಉಪತಹಶೀಲ್ದಾರ್ ವೃಂದದ ಸಕ್ಷಮ ಪ್ರಾಧಿಕಾರವಾದ ಪ್ರಾದೇಶಿಕ ಆಯುಕ್ತರುಗಳಿಗೆ ಕಳುಹಿಸಲಾಗಿತ್ತು.

10. ಅದರನುಸಾರ ರಾಜ್ಯದ ನಾಲ್ಕು ಪ್ರಾದೇಶಿಕ ಆಯುಕ್ತರುಗಳು ಈಗಾಗಲೇ ಹೊರಡಿಸಲಾಗಿದ್ದ ಶಿರಸ್ತೇದಾರ್/ಉಪ ತಹಶೀಲ್ದಾರ್‌ರ ಅಂತಿಮ ಜೇಷ್ಠತಾ ಪಟ್ಟಿಯನ್ನು ಪುನಃ ಉಲ್ಲೇಖ (3) ಮತ್ತು (4)ರ ಆದೇಶಗಳಲ್ಲಿನ ಸೂಚನೆಗಳನುಸಾರ ಮನರಾವಲೋಕಿಸಿ ಆಯಾ ವಿಭಾಗದ ಎಲ್ಲಾ ಜಿಲ್ಲೆಯ ಜಿಲ್ಲಾಧಿಕಾರಿಗಳು ಪ್ರಚುರಪಡಿಸಿರುವ ಅವರ ಜಿಲ್ಲೆಯ ಪ್ರ.ದ.ಸ / ಪ್ರ.ದ.ರಾನಿ / ಶೀಘ್ರಲಿಪಿಗಾರರ ವೃಂದದ ಅಂತಿಮ ಜೇಷ್ಠತಾ ಪಟ್ಟಿಯನ್ನು ಜೇಷ್ಠತಾ ನಿಯಗಳನುಸಾರ ಪರಿಶೀಲಿಸಿ ಶಿರಸ್ತೇದಾರ್ / ಉಪತಹಶೀಲ್ದಾರ್ ವೃಂದದ ಅಂತಿಮ ಪರಿಷ್ಕೃತ ಜೇಷ್ಠತಾ ಪಟ್ಟಿಯನ್ನು ಉಲ್ಲೇಖಿತ (6) ರಿಂದ (9)ರಲ್ಲಿ ಕ್ರಮವಾಗಿ ನಮೂದಿಸಿರುವ ದಿನಾಂಕ: 24.01.2020, 12.02.2020, 20.02.2020 ಮತ್ತು 07.03.2020ರ ದಿನಾಂಕಗಳಂದು ಪ್ರಾದೇಶಿಕ ಆಯುಕ್ತರುಗಳು ಹೊರಡಿಸಿ ಸರ್ಕಾರಕ್ಕೆ ಸಲ್ಲಿಸಿರುತ್ತಾರೆ.

--4

11. ನಾಲ್ಕು ವಿಭಾಗದ ಪ್ರಾದೇಶಿಕ ಆಯುಕ್ತರುಗಳು ಸರ್ಕಾರಕ್ಕೆ ಸಲ್ಲಿಸಿರುವ ಶಿರಸ್ತೇದಾರ / ಉಪ ತಹಶೀಲ್ದಾರ್ ವೃಂದದ ಅಂತಿಮ ಪರಿಷ್ಕೃತ ಜೇಷ್ಠತಾ ಪಟ್ಟಿಯನ್ನು ಆಧರಿಸಿ ದಿನಾಂಕ: 27.04.1978 ರಿಂದ 31.12.2018ರ ವರೆಗಿನ ಅಂದರೆ ದಿನಾಂಕ : 01.01.2019ಕ್ಕೆ ಇರುವ ರಾಜ್ಯ ಮಟ್ಟದ ಕ್ರೋಢೀಕೃತ ಶಿರಸ್ತೇದಾರ / ಉಪ ತಹಶೀಲ್ದಾರ್ ವೃಂದದ ಅಂತಿಮ ಜೇಷ್ಠತಾ ಪಟ್ಟಿಯನ್ನು ಈ ಅಧಿಕೃತ ಜ್ಞಾಪನದ ಅನುಬಂಧ–1 ಮತ್ತು 2ರಲ್ಲಿರುವಂತೆ ಕಂದಾಯ ಇಲಾಖೆಯ ವೆಬ್‌ಸೈಟ್‌ನಲ್ಲಿ www.karunadu.karnataka.gov.in/kandaya ಅಳವಡಿಸಿ, ಈ ಮೂಲಕ ಎಲ್ಲಾ ಸಂಬಂಧಪಟ್ಟವರ ಮಾಹಿತಿಗಾಗಿ ಪ್ರಕಟಿಸಲಾಗಿದೆ.

07/04/2020

(ಬಿ.ಎನ್.ಭಾಗ್ಯ)
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ (ಸೇವೆಗಳು–1).

**ಇವರಿಗೆ:**

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು– ಸದರಿ ಅಧಿಸೂಚನೆಯನ್ನು ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಿ, ಅದರ 500 ಪ್ರತಿಗಳನ್ನು ಈ ಶಾಖೆಗೆ ಕಳುಹಿಸುವಂತೆ ಕೋರಿದೆ.

**ಪ್ರತಿ:–**

1. ಪ್ರಾದೇಶಿಕ ಆಯುಕ್ತರು, ಬೆಂಗಳೂರು ವಿಭಾಗ, ಬೆಂಗಳೂರು
2. ಪ್ರಾದೇಶಿಕ ಆಯುಕ್ತರು, ಮೈಸೂರು ವಿಭಾಗ, ಮೈಸೂರು
3. ಪ್ರಾದೇಶಿಕ ಆಯುಕ್ತರು, ಬೆಳಗಾವಿ ವಿಭಾಗ, ಬೆಳಗಾವಿ.
4. ಪ್ರಾದೇಶಿಕ ಆಯುಕ್ತರು, ಕಲಬುರಗಿ ವಿಭಾಗ, ಕಲಬುರಗಿ
5. ಎಲ್ಲಾ ಜಿಲ್ಲೆಯ ಜಿಲ್ಲಾಧಿಕಾರಿಗಳು
6. ಎಲ್ಲಾ ಉಪ ವಿಭಾಗಾಧಿಕಾರಿಗಳು
7. ಎಲ್ಲಾ ತಾಲ್ಲೂಕು ತಹಶೀಲ್ದಾರ್‌ರುಗಳು

} ಶಿರಸ್ತೇದಾರ್/ಉಪ ತಹಶೀಲ್ದಾರ್‌ಗಳ ಗಮನಕ್ಕೆ ತರುವಂತೆ ಕೋರಲಾಗಿದೆ.

**ಪ್ರತಿ ಮಾಹಿತಿಗಾಗಿ:**

1. ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿ/ ಅಪರ ಕಾರ್ಯದರ್ಶಿ (ಸೇವೆಗಳು–1, ಭೂ–ಮಾಪನ ಮತ್ತು ವಿಶೇಷ ಕೋಶ)/ಉಪ ಕಾರ್ಯದರ್ಶಿ (ಸೇವೆಗಳು–3)ಇವರುಗಳ ಆಪ್ತ ಕಾರ್ಯದರ್ಶಿ / ಆಪ್ತ ಸಹಾಯಕರಿಗೆ
2. ಸರ್ಕಾರದ ಅಧೀನ ಕಾರ್ಯದರ್ಶಿ, ಕಂದಾಯ ಇಲಾಖೆ (ಸೇವೆಗಳು–3).
3. ಮೇಲ್ವಿಚಾರಕರು, ಗಣಕಯಂತ್ರ ವಿಭಾಗ, ಕಂದಾಯ ಇಲಾಖೆ ಇವರಿಗೆ ವೆಬ್‌ಸೈಟಿನಲ್ಲಿ ಪ್ರಕಟಿಸುವ ಸಲುವಾಗಿ
4. ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು